# ದೇಸಿ ಸಾಹಿತ್ಯ ಸಂಪಾದನೆಯಲ್ಲಿ ವೈ.ಸಿ. ಭಾನುಮತಿ ಅವರ ಹೆಜ್ಜೆ ಗುರುತು

**ಮಾನಸ ಎಂ.**

ಹಲಗೇರಿ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ.

**Received: 12/10/2024 ; Acepted: 10/11/2024 ; Published: 06/12/2024**

**DOI: https://doi.org/10.5281/zenodo.14289950**

## ABSTRACT:

ವೈ.ಸಿ. ಭಾನುಮತಿ ಅವರು ಹಸ್ತಪ್ರತಿ ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಇವರ ಕೃತಿಗಳ ಮೂಲಕ ಅವಲೋಕಿಸಲಾಗಿದೆ. ಹಸ್ತಪ್ರತಿ ಹಾಗೂ ಗ್ರಂಥ ಸಂಪಾದನಾ ಕ್ಷೇತ್ರವು ಶ್ರಮದಾಯಕವಾಗಿರುವಂತಹದ್ದು, ಈ ಶ್ರಮದಾಯಕ ಕ್ಷೇತ್ರವನ್ನು ವೃತ್ತಿಯಾಗಿ ಸ್ವೀಕರಿಸಿ, ಅನೇಕ ಗ್ರಂಥ ಸಂಪಾದಕ ವಿದ್ವಾಂಸರ ಹಾದಿಯಲ್ಲಿ ವೈ.ಸಿ. ಭಾನುಮತಿಯವರು ಸಹ ಪ್ರಮುಖರಾಗಿರುತ್ತಾರೆ. ಭಾನುಮತಿ ಅವರು ಇದುವರೆಗೂ ಹಲವಾರು ಪ್ರಾಚೀನ ಹಳೆಗನ್ನಡ ಕೃತಿಗಳನ್ನು ಸಂಪಾದಿಸಿ, ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಇವರ ಕೃತಿಗಳನ್ನು ಮಾರ್ಗ–ದೇಶಿ–ಮೌಖಿಕ ಎಂದು ವಿಭಾಗಿಸಿಕೊಂಡು ಆಯ್ದ ಕೆಲವು ಕೃತಿಗಳ ಸಂಪಾದನೆ, ವೈಧಾನಿಕತೆಯ ಕುರಿತು ಪ್ರಸ್ತುತ ಬರಹದಲ್ಲಿ ನೀಡಲಾಗಿದೆ. ಇವರ ಮಾರ್ಗ–ದೇಶಿ ಕೃತಿಗಳ ಸಂಪಾದನೆಯಲ್ಲಿ ಕನ್ನಡನಾಡಿನ ಚರಿತ್ರೆ ತಿಳಿಯುವಂತಹ ಚಾರಿತ್ರಿಕ ಅಂಶಗಳು, ಸಾಮಾಜಿಕ, ಆರ್ಥಿಕ ಮತ್ತು ಕೃತಿಗೆ ಸಂಬಂಧಿಸಿದ ಪೂರಕ ಸಾಹಿತ್ಯವನ್ನು ಅನುಬಂಧದಲ್ಲಿ ದಾಖಲಿಸಿರುವುದು, ಭಾನುಮತಿ ಅವರ ಸಂಪಾದನೆಯ ವೈಶಿಷ್ಟವಾಗಿದೆ. ಇದರಿಂದ ಓದುಗರಿಗೆ ವೈ.ಸಿ. ಭಾನುಮತಿ ಅವರು ಗ್ರಂಥ ಸಂಪಾದನಾ ಕ್ಷೇತ್ರಕ್ಕೆ ನೀಡಿದ ಕೊಡುಗೆಯು ಇವರ ಸಂಪಾದಿತ ಕೃತಿಗಳಿಂದ ಸಂದ ಪ್ರಶಸ್ತಿಗಳಿಂದ ಇವರ ಸಂಪಾದನೆಯ ಮಹತ್ವ ತಿಳಿಯುತ್ತದೆ.

## KEYWORDS:

ವೈ. ಸಿ. ಭಾನುಮತಿ, ಗ್ರಂಥ ಸಂಪಾದನೆ, ಮಾರ್ಗ–ದೇಶಿ, ಪರಿಷ್ಕರಣೆ, ಸಹ್ಯಾದ್ರಿಖಂಡ.

ಮಾರ್ಗ ಸಾಹಿತ್ಯ ಸುಮತಿ ಹಾಗೂ ಗ್ರಂಥ ಸಂಪಾದನೆಯಲ್ಲಿ ವಿಶಿಷ್ಠ ಹೆಸರು ಡಾ. ವೈ.ಸಿ. ಭಾನುಮತಿ ಅವರು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಯಮಸಂಧಿ ಗ್ರಾಮದಲ್ಲಿ ಹುಟ್ಟಿದವರು. ತಂದೆ ವೈ.ಬಿ.ಚನ್ನೇಗೌಡ, ತಾಯಿ–ಜಯಮ್ಮ ಸ್ತ್ರೀ ಶಿಕ್ಷಣಕ್ಕೆ ಮನ್ನಣೆ ಇದ್ದರೂ ಹೆಚ್ಚಿನ ಶಿಕ್ಷಣಕ್ಕೆ ಒತ್ತು ಸಿಗದ ಕಾಲದಲ್ಲಿ ಸ್ವತಹ ಶಿಕ್ಷಕರಾದ ತಂದೆ–ತಾಯಿಗಳ ಪ್ರೋತ್ಸಾಹದಿಂದ ಭಾನುಮತಿ ಅವರು ಪ್ರಾಥಮಿಕ

ಶಿಕ್ಷಣವನ್ನು ಸ್ವಗ್ರಾಮದಲ್ಲಿ, ಪ್ರೌಢಶಾಲಾ ವ್ಯಾಸಂಗವನ್ನು ಬೇಲೂರಿನಲ್ಲಿ, ಹೆಚ್ಚಿನ ವಿದ್ಯಾಭ್ಯಾಸವನ್ನು ಮೈಸೂರು, ಮಂಗಳೂರಿನಲ್ಲಿ ಮಾಡಿದ್ದಾರೆ. ೧೯೭೫ ರಲ್ಲಿ ಮೈಸೂರು ಮಾನಸಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನಾ ಸಹಾಯಕಿ ವೃತ್ತಿಯನ್ನು ಪ್ರಾರಂಭಿಸುತ್ತಾರೆ. ಹೀಗೆ ವೃತ್ತಿಗೆ ಸೇರಿದಂದಿನಿಂದಲೂ ಭಾನುಮತಿ ಅವರು ನಿವೃತ್ತಿ ಆಗುವವರೆಗೂ, ನಿವೃತ್ತಿಯ ನಂತರವೂ ಗ್ರಂಥ ಸಂಪಾದನಾ ಕ್ಷೇತ್ರದಲ್ಲಿಯೇ ನಿರತರಾದವರು.

ಭಾನುಮತಿ ಅವರು ಇದುವರೆಗೂ ಹಳೆಗನ್ನಡ ಕೃತಿಗಳನ್ನು ಅಂದರೇ ಮಾರ್ಗ-ದೇಶಿ ಮೌಖಿಕ ಸಾಹಿತ್ಯ ಪ್ರಕಾರಕ್ಕೆ ಸೇರಿದ ೩೬ ಕೃತಿಗಳನ್ನು ಸಂಪಾದಿಸಿದ್ದಾರೆ. ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ೧೧ ಕೃತಿಗಳು, ಸಂಶೋಧನಾ ಲೇಖನಗಳಿಗೆ ಸಂಬಂಧಿಸಿದ ಲೇಖನ ಕೃತಿಗಳು, ಏಳು ಕೃತಿಗಳನ್ನು, ಇತರೆ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಶಿಶುಸಾಹಿತ್ಯ, ಸಹಭಾಗಿತ್ವ, ಆಧುನಿಕ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಮಾರ್ಗ-ದೇಶಿ-ಮೌಖಿಕ ಸಾಹಿತ್ಯ ಕೃತಿಗಳನ್ನು ಶಾಸ್ತ್ರೀಯವಾಗಿ ಸಂಪಾದನೆ ಮಾಡಿಕೊಟ್ಟ ಕೀರ್ತಿ, ವೈ.ಸಿ. ಭಾನುಮತಿ ಅವರಿಗೆ ಸಲ್ಲುತ್ತದೆ.

ಭಾನುಮತಿ ಅವರ ಪಿ.ಎಚ್.ಡಿ. ಮಹಾಪ್ರಬಂಧ, ಕನ್ನಡದಲ್ಲಿ ವರ್ಧಮಾನ ಸಾಹಿತ್ಯ ಈ ಸಂಶೋಧನಾ ಮಹಾಪ್ರಬಂಧಕ್ಕೆ ಆ.ನೇ. ಉಪಾಧ್ಯೆ ಚಿನ್ನದ ಪದಕ ಪುರಸ್ಕಾರ ಸಂದಿದೆ. ಹೀಗೆ ಭಾನುಮತಿ ಅವರ ಸಂಶೋಧನೆಯು ಪ್ರಾರಂಭದಲ್ಲಿಯೇ ಪೂರ್ಣಸ್ವರೂಪತೆ, ವಿಶೇಷತೆಯಿಂದ ಕೂಡಿದ್ದು, ಈವರೆಗಿನ ಸಂಪಾದಿತ ಕೃತಿಗಳವರೆಗೂ ವ್ಯಾಪಿಸಿರುವುದು ಕಂಡುಬರುತ್ತದೆ.

ಭಾನುಮತಿ ಅವರ ಸಂಪಾದಿತ ಕೃತಿಗಳನ್ನು ಮಾರ್ಗ-ದೇಶಿ, ಮೌಖಿಕ ಎಂದು ಪ್ರಕಾರ ಕೇಂದ್ರಿತವಾಗಿ ವರ್ಗೀಕರಿಸಬಹುದು

ಮಾರ್ಗ: ದಶಾವತಾರ ಚರಿತೆ, ಅನಂತನಾಥ ಚರಿತೆ, ಭೈರವೇಶ್ವರ ಪುರಾಣ, ಸರ್ಜಾಹನುಮೇಂದ್ರ ಯಶೋವಿಲಾಸ, ಪಾರ್ಶ್ವನಾಥ ಪುರಾಣ, ಪುಷ್ಪದಂತ ಪುರಾಣ, ಖಡ್ಗಶಾಸ್ತ್ರ.

ದೇಶಿ: ಪುರಾತನರ ಚರಿತೆ, ಷಟ್ಸ್ಥಲತಿಲಕ, ಏಕೋರಾಮೇಶ್ವರ ಪುರಾಣ, ಸಿದ್ಧಲಿಂಗಕಾವ್ಯ ಮತ್ತು ಮಹಾಕೂಟ ಮಹಾತ್ಮ, ಮಡಿವಾಳೇಶ್ವರ ಕಾವ್ಯ, ಬಸವ ಚರಿತೆ ಮತ್ತು ಶರಣ ಬಸವೇಶ್ವರ ಚರಿತೆ, ಸಹ್ಯಾದ್ರಿ ಖಂಡ, ಬತ್ತೀಸಪುತ್ತಳಿ ಕಥೆ, ಅರಸರ ಚರಿತ್ರೆಗಳು,

ಚಂದ್ರಸಾಗರವರ್ಣಿಯ ಮೂರು ಕೃತಿಗಳು, ವಿಜಯಕುಮಾರಿ ಚರಿತೆ, ಸುಕುಮಾರನ ಚರಿತೆ, ನಿಜಲಿಂಗ ಚಿಕ್ಕಯ್ಯನ ಸಾಂಗತ್ಯ, ಸೌಂದರ್ಯ ಕಾವ್ಯ, ಕನ್ನಡ ರತ್ನಕರಂಡಕ ಶ್ರಾವಕಾಚಾರಗಳು, ಸಿದ್ಧಮಂಕಚರಿತೆ, ಮಹಾದೇವ ಕೃತಿಯ ಸಾಂಗತ್ಯ ಕೃತಿಗಳು, ಭುಜಬಲಿಚರಿತೆ, ಬಸವೇಶ್ವರ ಮಹತ್ವದ ಸಾಂಗತ್ಯ, ಮಡಿವಾಳೇಶ್ವರ ಲಘುಕೃತಿಗಳು, ಸ್ವರವಚನ ಸಂಪುಟ (೪), ಸ್ವರವಚನ ಸಂಪುಟ (ಹತ್ತು) ಕವಿಲಿಂಗನ ಪದಗಳು, ಸಂಕೀರ್ಣ ವಚನ ಸಂಪುಟ (೩) ಸಂಕೀರ್ಣ ವಚನ ಸಂಪುಟ (೪) ಸಂಕೀರ್ಣ ವಚನ ಸಂಪುಟ (೬) ಅಕಾರಾಧಿ ನಿಘಂಟು ಮತ್ತು ವೈದ್ಯನಿಘಂಟು ವೈದ್ಯ ಗ್ರಂಥ ಸಂಪುಟ, ವಚನ ಸಂಕಲನ ಸಂಪುಟ ಐದು, ಸಿದ್ಧಲಿಂಗೇಶ್ವರ ಲಘುಕೃತಿಗಳು, ಮೌಖಿಕ ಇಬ್ಬೀಡಿನ ಜನಪದ ಕಥೆಗಳು, ಮಲೆನಾಡುಶೈವ ಒಕ್ಕಲಿಗರು ಜಾನಪದೀಯ ಅಧ್ಯಯನ, ಪುಟ್ಟಮಲ್ಲಿಗೆ, ಹಿಡಿತುಂಬ, ಜಾನಪದ ಭಿತ್ತಿ, ಜಾನಪದ ಆಂತರ್ಯ, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಜಾನಪದೀಯ ನೆಲೆಗಳು, ಜನಪದ ಅಡುಗೆ, ಜನಪದ ದೇವರ ಹಾಡುಗಳು, ಜನಪದ ಚಹರೆ, ಮಕ್ಕಳ ಹಾಡುಗಳು, ಚಂದ್ರಹಾಸನ ಕಥೆ, ಪ್ರಸ್ತುತ ಬರಹದಲ್ಲಿ ಆಯ್ದ ಕೆಲವು ಕೃತಿಗಳಾ ವೈಧಾನಿಕತೆ ಬಗ್ಗೆ ಇಲ್ಲಿ ಅವಲೋಕಿಸೋಣ.

**ಪುರಾತನರ ಚರಿತೆ (೧೯೭೬):** ಭಾನುಮತಿ ಅವರು ಸಂಪಾದಿಸಿದ ಮೊದಲ ಕಾವ್ಯ ಪ್ರಸ್ತುತ ಕೃತಿಯನ್ನು ಭಾನುಮತಿ ಅವರು ವೃತ್ತಿಗೆ ಸೇರಿ ಒಂದು ವರ್ಷದಲ್ಲಿ ಸಂಪಾದಿಸಿ, ಪ್ರಕಟಿಸಿದ್ದಾರೆ. ಈ ಕೃತಿಯ ಕರ್ತೃಕುಮಾರ ಚೆನ್ನಬಸವ, ಬಸವ ಪುರಾಣಗಳಲ್ಲಿ ಉಲ್ಲೇಖವಾದ ಪುರಾತನರ ಚರಿತ್ರೆಯನು ಕವಿ ವಿಸ್ತರಿಸಿ ಹೇಳಿದ್ದಾನೆ. ಪ್ರತಿಯೊಬ್ಬ ಶಿವಶರಣನ ಕಾಯಕ, ಶಿವನನ್ನು ಕಂಡುಕೊಂಡ ರೀತಿ, ಬಸವಣ್ಣನ ಪವಾಡಗಳ ಪ್ರತಿಪಾದನೆ ಇತ್ಯಾದಿ ವಿಷಯಗಳನ್ನು ಇದು ನಿರೂಪಿಸುತ್ತದೆ. ೯ ಸಂಧಿ, ೩೫೦ ವಾರ್ಧಕ ಷಟ್ಪದಿಯನ್ನೊಳಗೊಂಡ ಈ ಕೃತಿಯನ್ನು ಮೂರು ಹಸ್ತಪ್ರತಿಗಳ ನೆರವಿನಿಂದ ಪರಿಷ್ಕರಿಸಿದ್ದಾರೆ. ಅನುಬಂಧದಲ್ಲಿ ವ್ಯಕ್ತಿಸೂಚಿ, ಅರ್ಥಕೋಶ, ಪದ್ಯಗಳ ಅಕಾರಾದಿಗಳು ಕೃತಿಯ ಓದಿಗೆ ಪೂರಕವಾಗಿವೆ.

**ಸಹ್ಯಾದ್ರಿಖಂಡ (೧೯೮೪):** ಕರ್ನಾಟಕದ ಅನೇಕ ತೀರ್ಥ ಕ್ಷೇತ್ರಗಳು ಹಾಗೂ ನದಿಗಳ ಮಹತ್ವವನ್ನು ತಿಳಿಸುವ ಬೃಹತ್ ಕಾವ್ಯ, ಸಹ್ಯಾದ್ರಿಖಂಡ, ಗೋದಾವರಿ ನದಿಯಿಂದ ಪಯಶ್ವಿನಿ ನದಿಯವರೆಗೆ ಬನವಾಸಿಯಿಂದ ಭಗವತೀ ಕ್ಷೇತ್ರದವರೆಗೆ ಸಹ್ಯಾದ್ರಿ ಶ್ರೇಣಿಯಲ್ಲಿರುವ ಸುಮಾರು ಒಂದು ನೂರು ತೀರ್ಥಗಳು, ೮೦ ಕ್ಷೇತ್ರಗಳ ವಿವರಗಳನು ಕವಿ ೮೯ ಸಂಧಿಯ ೩೨೭೨ ಭಾಮಿನಿ ಪದ್ಯಗಳ ಬೃಹತ್ ಕೃತಿ

ಸಹ್ಯಾದ್ರಿಖಂಡ, ಇದು ಸಹ್ಯಾದ್ರಿ ಪರಿಸರದ ಭೌಗೋಳಿಕ ಸ್ವರೂಪವನ್ನು ತಿಳಿದುಕೊಳ್ಳಲು ಸಹಾಯಕವಾಗುವ ಸ್ಥಳ ಮಹಾತ್ಮೆಯಾಗಿದೆ. ಈ ಕೃತಿಗೆ ೧೬೯ ಪುಟಗಳ ಪ್ರಸ್ತಾವನೆ ನೀಡಿದ್ದು, ಇವರ ಪಾಂಡಿತ್ಯ, ಶಾಸ್ತ್ರಜ್ಞಾನ, ಸಂಪಾದನಾಕಾರ್ಯ ಸಾಮರ್ಥ್ಯಕ್ಕೆ ಈ ಕೃತಿಗಳೇ ಸಾಕ್ಷಿಯಾಗಿವೆ. ಪ್ರಸ್ತುತ ಗ್ರಂಥಕ್ಕಾಗಿ ರಾಜ್ಯ ಸಾಹಿತ್ಯ ಅಕಾಡೆಮಿ ಶ್ರೇಷ್ಠ ವಾರ್ಷಿಕ ಗ್ರಂಥ ಬಹುಮಾನ ಇವರಿಗೆ ಸಂದಿದೆ.

ಅನುಬಂಧದಲ್ಲಿ ಕ್ಷೇತ್ರಗಳ ಸೂಚಿ, ವ್ಯಕ್ತಿಗಳ ಸೂಚಿ, ಕೆಲವು ಕ್ಷೇತ್ರಗಳ ಛಾಯಾಚಿತ್ರಗಳು ಅರ್ಥಕೋಶ, ಆಕರಗಳ ಸೂಚಿಗಳು ಕಾವ್ಯದ ಅಭ್ಯಾಸಕ್ಕೆ ಪೂರಕ ಮಾಹಿತಿಗಳನ್ನು ಒದಗಿಸುತ್ತವೆ.

**ಅರಸರ ಚರಿತ್ರೆಗಳು (೨೦೦೯) :** ಕೃತಿಯನ್ನು ವಿಜಯನಗರೋತ್ತರ ಕಾಲದ ಪಾಳೇಗಾರರು, ಅರಸುಮನೆತನಗಳು, ವಿವಿಧ ರಾಜರಿಗೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಿ ಪರಿಷ್ಕರಿಸಿದ್ದು, ವೃತ್ತಾಂತ, ತರೀಕೆರೆ ಕೈಫಿಯತ್ತು, ಮೌನಾಮಿಯ, ಬೌಪದ, ವೇಣುಪುರದ ಕ್ಷತ್ರಿಯರ ವಂಶಾವಳಿ, ಶ್ರವಣಬೆಳಗೋಳದ ಸ್ಥಳಪುರಾಣ, ಹೊಯ್ಸಳಾದಿರಾಜರ ಚರಿತ್ರೆ, ಹೀಗೆ ೨೪ ದಾಖಲೆರೂಪದ ಕಿರುಕೃತಿಗಳು ಇಲ್ಲಿವೆ. ಇದರಿಂದ ಕರ್ನಾಟಕದ ಚರಿತ್ರೆಯನ್ನು ಕಾವ್ಯದ ಮೂಲಕ ಅರಿಯಲು ಸಹಾಯಕವಾಗಿದೆ.

**ಬತ್ತೀಸಪುತ್ಥಳಿ ಕಥೆ (೧೯೮೯):** ಈ ಕೃತಿಯಲ್ಲಿ ಒಂದು ವಸ್ತುವಿಗೆ ಸಂಬಂಧಿಸಿದ ಕೃತಿಗಳೆಲ್ಲ ಒಂದೇ ಸಂಪುಟದಲ್ಲಿ ಪ್ರಕಟವಾಗುತ್ತಿರುವುದು, ಒಂದು ವೈಶಿಷ್ಟವಾಗಿದೆ. ಪಂಚತಂತ್ರ ಕಥೆಗಳ ಮಾದರಿಯಲ್ಲಿ ಪ್ರಸಿದ್ಧವಾದವು ಬತ್ತೀಸಪುತ್ಥಳಿ ಕಥೆ, ಇದು ಸಂಸ್ಕೃತದ ದ್ವಾತ್ರಿಂಶತ್ಪುತ್ತಳಿ ಕಥೆ ಆಧರಿಸಿದ್ದರೂ ಕನ್ನಡದಲ್ಲಿ ಅನೋನ್ಯತೆ ಹೊಂದಿದೆ. ಇದರಲ್ಲಿ ರಾಮೇಂದ್ರನ ಸೌಂದರ್ಯ ಕಥಾರತ್ನ, ವೀರಶೈವ ಸಂಪ್ರದಾಯದ ಬತ್ತೀಸಪುತ್ಥಳಿ ಕಥೆ, ದೇವವಿರಚಿತ ಬತ್ತೀಸಪುತ್ತಳಿ ಕಥಾ ಪ್ರಬಂಧ, ದ್ವಿತ್ರಿಂಶತ್ಪುತ್ತಳಿ ಕಥೆ, ಈ ರೀತಿ ಸಂಪ್ರದಾಯದ ಕೃತಿಗಳನ್ನು ಪರಿಷ್ಕರಿಸಿ, ಭಾನುಮತಿ ಅವರು ಪ್ರಕಟಿಸಿದ್ದಾರೆ.

ಈ ಕೃತಿಯ ಪ್ರಸ್ತಾವನೆಯಲ್ಲಿ ಚಾರಿತ್ರಿಕ ಸಂಗತಿಗಳು, ಕಾಲ್ಪನಿಕ ವಿಚಾರಗಳು, ಜಾನಪದ ಅಂಶಗಳು, ಕಥೆಗಳ ಉಗಮ, ಕವಿ, ಕಾಲ, ವಿಚಾರ ಕುರಿತು ಚರ್ಚಿಸಿದ್ದಾರೆ. ಈ ಗ್ರಂಥಕ್ಕೆ ಬಿ.ಎಂ.ಶ್ರೀಪ್ರತಿಷ್ಠಾನ ಸಂಶೋಧನ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯದ ತೀ.ನಂ.ಶ್ರೀ ಸಂಶೋಧನಾ ಪ್ರಶಸ್ತಿ ಮತ್ತು ೧೯೮೯ರ ರಾಜ್ಯ ಸಾಹಿತ್ಯ ಅಕಾಡಮಿ ಪುಸ್ತಕ ಬಹುಮಾನ ಈ ಮೂರು ಪ್ರಶಸ್ತಿಗಳು ಸಂದಿವೆ.

**ಸಿದ್ಧಲಿಂಗ ಕಾವ್ಯ ಮತ್ತು ಮಹಾಕೂಟ ಮಹಾತ್ಮೆ (೨೦೦೬):** ಈ ಕೃತಿಯಲ್ಲಿ ಎರಡು ಕಾವ್ಯಗಳಿವೆ. ಇಲ್ಲಿನ ಕಾವ್ಯಗಳನ್ನು ಬೇರೆ ಬೇರೆ ಕವಿಗಳು ರಚಿಸಿದ್ದರೂ

ಇವುಗಳನ್ನು ಸಂಯುಕ್ತವಾಗಿ ಪ್ರಕಟಿಸಿರುವುದು ಎರಡು ಕಾವ್ಯಗಳು ತೀರ್ಥಕ್ಷೇತ್ರವನ್ನು ವಸ್ತುವಾಗಿರಿಸಿಕೊಂಡಿರುವುದಕ್ಕೆ ಹಾಗೂ ಈ ಕಾವ್ಯಗಳ ಆಶಯ, ಮನೋಧರ್ಮಗಳಲ್ಲಿ ಸಮಾನತೆ ಇರುವುದಕ್ಕೆ ಎಂದು ಗುರುತಿಸಲಾಗಿದೆ.

ಒಂದು ಕಾವ್ಯ ಸಿದ್ಧಲಿಂಗಕಾವ್ಯ ಈ ಕಾವ್ಯ ಸೂಳೆಕೆರೆಯ ವೃತ್ತಾಂತವನ್ನು ತಿಳಿಸಿದರೆ, ಎರಡನೇ ಕಾವ್ಯ ಮಹಾಕೂಟ ಮಹಾತ್ಮೆ ಈ ಕಾವ್ಯ ಮಹಾಕೂಟ ಕ್ಷೇತ್ರದ ಬಗ್ಗೆ ಮಾಹಿತಿಯನ್ನು ತಿಳಿಸುತ್ತದೆ. ಈ ಕಾವ್ಯದಲ್ಲಿ ಭಾನುಮತಿ ಅವರು ವಸ್ತು ನಿರ್ವಹಣೆಗೆ ಅಷ್ಟೇ ಕವಿ ಸೀಮಿತವಾಗದೇ ಕವಿ ಸ್ವಧರ್ಮ ಅಷ್ಟೇ, ಪ್ರತಿಪಾದಿಸದೇ ಸರ್ವಕಾಲಿಕ ಮೌಲ್ಯಗಳನ್ನು ಪ್ರತಿಪಾದಿಸಿರುವುದನ್ನು ಗುರುತಿಸಿದ್ದಾರೆ. ಪ್ರಸ್ತುತ ಕೃತಿಗಳನ್ನು ೩ ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಕೊನೆಯಲ್ಲಿ ಪದ್ಯಗಳ ಅಕಾರಾದಿ ನೀಡಲಾಗಿದೆ. ಪ್ರಸ್ತುತ ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಮತಿ ಜಯಲಕ್ಷ್ಮಿ ಸಣ್ಣಯ್ಯ ಗ್ರಂಥ ಸಂಪಾದನೆ ದತ್ತಿ ಬಹುಮಾನ ಸಂದಿದೆ.

**ಸೌಂದರ ಕಾವ್ಯ (೧೯೯೬):** ಈ ಕಾವ್ಯವನ್ನು ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಲಾಗಿದೆ. ಮೈಸೂರು ರಾಜರಿಗೆ ದಳವಾಯಿಗಳಾಗಿದ್ದ ಕಳಲೆ ಅರಸರಿಗೆ ಸಂಬಂಧಿಸಿದ ಇತಿಹಾಸವನ್ನು ನಿರೂಪಿಸುತ್ತದೆ. ಮೊಗಲರೊಂದಿಗೆ ಈ ಕಳಲೆ ಅರಸರು, ನಡೆಸಿದ ಯುದ್ಧದ ವರ್ಣನೆ ವಿವರ ಇದೆ. ಇಲ್ಲಿ ದಳವಾಯಿ ರಾಜರಾದ ದೇವರಾಜ-ನಂಜನರಾಜರನ್ನು ದೇವೇಂದ್ರ ಹಾಗೂ ಅರ್ಜುನರೊಂದಿಗೆ ಸಮೀಕರಿಸಲಾಗಿದೆ. ಈ ಕಾವ್ಯದಲ್ಲಿ ಅಂದಿನಕಾಲದ ಸಾಮಾಜಿಕ, ಚಾರಿತ್ರಿಕ, ಧಾರ್ಮಿಕ, ಸಾಹಿತ್ಯಿಕ ಕೊಡುಗೆಗಳನ್ನು ಚರ್ಚಿಸಿದ್ದಾರೆ. ಅನುಬಂಧದಲ್ಲಿ ಈ ಕೃತಿಗೆ ಸಂಬಂಧಿಸಿದ ವೇಣುಪುರದ ಕ್ಷತ್ರಿಯರು ವಂಶಾವಳಿ ಸಾತ್ರೇಯ ಪಟ್ಟವಿವರ, ಮಾನೌಮಿ ಚೌಪದಗಳನ್ನು ಕೊಡಲಾಗಿದೆ.

ಹೀಗೆ ಭಾನುಮತಿ ಅವರು ಪರಿಷ್ಕರಿಸಿ ಪ್ರಕಟಿಸಿದ ಕೃತಿಗಳು, ಅನೇಕ ವಿಷಯಗಳಿಗೆ ಪೂರಕವಾಗುವುದರ ಜೊತೆಗೆ ಕರ್ನಾಟಕದ ಚರಿತ್ರೆ, ಸಾಹಿತ್ಯಿಕ ಅಂಶಗಳು, ಧಾರ್ಮಿಕ ವಿಚಾರಗಳನ್ನು ತಿಳಿಯಲು ಸಹಾಯಕವಾಗಿದೆ. ಜೊತೆಗೆ ಭಾನುಮತಿ ಅವರ ಪರಿಷ್ಕರಣೆಯಿಂದ ದೀರ್ಘವಾದ ಪ್ರಸ್ತಾವನೆ ಭಾಗಗಳಿಂದ ಅನುಬಂಧದಲ್ಲಿ ಕೃತಿಗೆ ಪೂರಕವಾದ ಸಾಹಿತ್ಯವನ್ನು ಪದಸೂಚಿ ಅಕಾರಾದಿಸೂಚಿಗಳನ್ನು ನೀಡಿರುವುದು ಇವರ ವಿದ್ವತ್ ಪಾಂಡಿತ್ಯ ವಿಶಿಷ್ಠತೆಗೆ ಇವರ ಕೃತಿಗಳೇ ಸಾಕ್ಷಿ ಆಗಿವೆ.

**ಪರಾಮರ್ಶನ ಗ್ರಂಥಗಳು:**


1. ಹಳ್ಳಿಕೇರಿ ಎಫ್. ಟಿ. (೨೦೧೮). ಹಸ್ತಪ್ರತಿ ವ್ಯಾಸಂಗ–೧೭. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
2. ಭಾನುಮತಿ ವೈ. ಸಿ. (೧೯೭೬). ಪುರಾತನ ಚರಿತೆ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
3. ಭಾನುಮತಿ ವೈ. ಸಿ. (೧೯೮೪). ಸಹ್ಯಾದ್ರಿಖಂಡ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
4. ಭಾನುಮತಿ ವೈ. ಸಿ. (೨೦೦೯). ಅರಸರ ಚರಿತ್ರೆಗಳು. ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ. ಬೆಂಗಳೂರು.
5. ಭಾನುಮತಿ ವೈ. ಸಿ. (೧೯೮೯). ಬತ್ತೀಸಪುತ್ಥಳಿ ಕಥೆ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
6. ಭಾನುಮತಿ ವೈ. ಸಿ. (೨೦೦೬). ಸಿದ್ಧಲಿಂಗ ಕಾವ್ಯ ಮತ್ತು ಮಹಾಕೂಟ ಮಹಾತ್ಮೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
7. ಭಾನುಮತಿ ವೈ. ಸಿ. (೧೯೯೬). ಸೌಂದರ್ಯಕಾವ್ಯ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.